ಮಗ ಇದ್ದಿದ್ದರೆ ಇವನಷ್ಟು ಎತ್ತರಕ್ಕೆ ಬೆಳೆಯುತ್ತಿದ್ದನಾ, ಇವನ ಹಾಗೆ ಉದ್ದ ಕೂದಲನ್ನು ಬಿಟ್ಟು ಆಗಾಗ್ಗೆ ನೇವರಿಸಿಕೊಳ್ಳುತ್ತಿದ್ದನಾ, ಕುರುಚಲು ಗಡ್ಡ ಬಿಡುತ್ತಿದ್ದನಾ, ಆ ಹುಡುಗನನ್ನು ತಬ್ಬಿಕೊಳ್ಳಬೇಕಿತ್ತು, ಕಂದಾ ಎಂದು ನೆರಿಗೆ ಬೀಳದ ಹಣೆಗೊಮ್ಮೆ ಮುತ್ತನಿಡಬೇಕಿತ್ತು, ಚಹಾ ಕುಡಿಯುವ ತನಕ ಕಾದು ನಾನೇ ಕಪ್ಪನ್ನು ಕಸದ ಬುಟ್ಟಿಗೆ ಎಸೆಯಬೇಕಿತ್ತು' ಎಂದೆಲ್ಲಾ ಎನಿಸಿತು.

'ನಾಳೆ ಆದಷ್ಟು ಬೇಗ ಆಸ್ಪತ್ರೆಗೆ ಹೋಗಬೇಕು, ಆ ಹುಡುಗನನ್ನು ಮತ್ತೊಮ್ಮೆ ಕಣ್ತುಂಬಿ ನೋಡಬೇಕು, ಒಂದು ಬಾಚಣಿಗೆ ಇಟ್ಟುಕೊಳ್ಳುತ್ತೇನೆ, ಸಾಧ್ಯವಾದಲ್ಲಿ ನಾನೇ ಒಮ್ಮೆ ಅವನ ತಲೆ ಬಾಚುತ್ತೇನೆ, ಅವನು ಒಪ್ಪದಿದ್ದರೆ ಈ ಬಾಚಣಿಗೆ ನಿನಗಾಗಿ, ಇಟ್ಟುಕೋ, ಕಳೆಯಬೇಡ, ಇದು ಹಾಳಾಗುವ ತನಕ ದಿನ ಇದರಲ್ಲೇ ತಲೆ ಬಾಚಿಕೋ, ನಿನಗೆ ಗಡ್ಡ ಸೇರುತ್ತದೆ, ಮೀಸೆ ಇನ್ನೊಂದು ಚೂರು ದಪ್ಪಗೆ ಬಿಡು, ಮಸ್ತ್ ಕಾಣ್ತೆಯ' ಎಂದೆಲ್ಲಾ ತನ್ನಲ್ಲಿಯೇ ನೂರು ಬಾರಿ ಹೇಳಿಕೊಂಡಳು.

ಹೊಸ ಪಾತ್ರೆಗೆ ಅಂಟಿಕೊಂಡ ಸ್ಟಿಕ್ಕರಿನ ಹಾಗೆ ಇವಳ ಎರಡು ನೆನಪುಗಳಿವೆ. ಎಷ್ಟೇ ಮುತುವರ್ಜಿಯಿಂದ ಕೀಳಲು ಪ್ರಯತ್ನಿಸಿದರೂ ಕಲೆಗಳು ಉಳಿದುಬಿಟ್ಟಿವೆ. ಇವಳು ಪಿಸು ಮೆಲ್ಲಗೆ ಪಾತ್ರೆಯಿಂದ ಸ್ಟಿಕ್ಕರನ್ನು ಒಂದು ಮೂಲೆಯಿಂದ ಬೇರ್ಪಡಿಸಲು ಕೂರುತ್ತಾಳೆ. ನಿಧಾನವಾಗಿ ಕಳಚಿಕೊಳ್ಳುತ್ತಾ ಇನ್ನೇನು ಅಂಟು ಕಿತ್ತು ಕೈಗೆ ಸಿಕ್ಕಿ ಬಿಟ್ಟಿತ್ತು ಸ್ಟಿಕ್ಕರು ಎಂಬುವಷ್ಟರಲ್ಲಿ ಹರಿದು ಹೋಗುತ್ತಿದೆ ಇಡೀ ನೆನಪಿನ ಸ್ಟಿಕ್ಕರು. ಇದನ್ನು ಹಾಗೇ ಬಿಟ್ಟರೆ ಏನೋ ತನಗೆ ಮೋಸವಾದಂತೆ ಇದ್ದು ಬಿಟ್ಟ ಕಲೆಗಳ ಕುರುಹಗಳ ಯೋಚಿಸುತ್ತಾಳೆ. ಹರಿದು ಹೋದ ನೆನಪುಗಳಲ್ಲಿ ಹುಡುಕುತ್ತಾಳೆ ತಾನು ನೆನಪಿಗೆ ವಲಸೆ ಬಂದ ದಾರಿಯನ್ನು.

* * *

ಅಂದುಕೊಂಡಂತೆ ಬೇಗ ಎದ್ದು ಬಿಸಿಯಾದ ಚಹಾ ಮಾಡಿ ಥರ್ಮಾ ಫ್ಲಾಸ್ಕು ತೆಗೆದುಕೊಂಡು, ಒಂದು ಪುಟ್ಟ ಬಾಚಣಿಗೆಯ ಸಮೇತ ಮುಖ್ಯ ರಸ್ತೆಯ ಬೇಕರಿಯಲ್ಲಿ ಬ್ರೆಡ್ಡು, ಬಿಸ್ಕತ್ತು, ಸ್ವೀಟು ತೆಗೆದುಕೊಂಡು ಆಸ್ಪತ್ರೆಗೆ ತುಸು ವೇಗವಾಗಿ ನಡೆದು ಹೋದಳು. ಅಮ್ಜದ್ ಖಾನಿನ ವೇಷ ತೊಟ್ಟ ನಲವತ್ತೈದರ ವಯೋಮಾನದ ಕೋಲು ಮುಖದ ವ್ಯಕ್ತಿ ಓಪಿಡಿಯಲ್ಲಿ



ನಿಂತು ಏನೋ ವಿಚಾರಿಸುತ್ತಿದ್ದ. ಅವನನ್ನು ನೋಡಿ 'ಚಾಕುಂಡ ಅಲ್ವಾ ನೀವು, ನಿಮ್ಮ ಸ್ನೇಹಿತ ಕಕೂನ ಹೇಗಿದ್ದಾರೆ, ಮೆಂಚಿಕಾಯಿ ಅವರು ನೆನ್ನೆ ಬೆಳಿಗ್ಗೆ ಸಿಕ್ಕಿದ್ದರು, ಅವರಂತೂ ಮಾತುಮಾತಿಗೆ ನಗ್ತಾರಪ್ಪ, ಒಂಥರಾ ವಿಚಿತ್ರ ಮನುಷ್ಯ' ಎಂದು ಹೇಳಿದಳು. ಇವನಿಗೆ 'ನನ್ನ ಹೆಸರನ್ನು ಖಡಕ್ಕಾಗಿ ಹೇಳಿದಳಲ್ಲ, ನನ್ನ ಹೆಸರು ಅಷ್ಟು ಜನಪ್ರಿಯವೇ, ಈಯಮ್ಮನಿಗೆ ಹೇಗೆ ನಾನು ಗೊತ್ತು, ಕಕೂನನ ಬಗ್ಗೆ ವಿಚಾರಿಸ್ತಾ ಇದ್ದಾಳೆ, ಮೆಂಚಿಕಾಯಿಯ ಬಗ್ಗೆಯೂ ಗೊತ್ತಿದೆ ಇವಳಿಗೆ, ಇವಳೇನು ಗುಪ್ತಚರದವಳೇ' ಎಂದೆಲ್ಲಾ ಪ್ರಶ್ನೆಗಳು ಗಿರಕಿ ಹೊಡೆದವು.

ಇವಳು 'ಯಾಕೆ ಅಷ್ಟೊಂದು ಯೋಚಿಸ್ತಿದ್ದೀರಾ, ನಾನು ಅವರಿಗೆ ಚಹಾ ಕೊಡೋಕೆ ಹೋಗಿದ್ದೆ, ಆಗ ನಿಮ್ಮ ಕೈ ಹಿಡಿದುಕೊಂಡು 'ಚಾಕುಂಡ, ಚಾಕುಂಡ' ಎಂದು ಹೇಳ್ತಿದ್ದರಲ್ವಾ ಆಗ ಕೇಳಿಸಿಕೊಂಡಿದ್ದೆ, ಹಾಗಾಗಿ ನಿಮ್ಮ ಹೆಸರು ನೆನಪಿದೆ, ಏನೇ ಆದರೂ ನಿಮ್ಮ ಸ್ನೇಹಿತನ ಜೀವ ಭಾಳ ಗಟ್ಟಿ, ತೋಳ ಕಚ್ಚಿದ್ರೂ ಇನ್ನೂ ಸರಿಹೋಗಿಲ್ಲ ನೋಡಿ' ಎಂದು ಹೇಳಿದಳು. ಚಾಕುಂಡ ಒಮ್ಮೆಲೆ ಗಾಬರಿಗೊಂಡ. 'ಮಾನ ಮರ್ಯಾದೆಗೆ ಅಂಜುತ್ತಿದ್ದ ಕಕೂನನ ಖಾಸಗಿ ಸಮಚಾರ ಇಲ್ಲಿ ಚಹಾ ಸಮಾರಾಧನೆಯಲ್ಲಿ ಬಯಲಾಗಿದೆಯಲ್ಲ, ಇನ್ನೂ ಅದೆಷ್ಟು ಜನರಿಗೆ ಪುಕಾರು ಹೋಗಿದೆಯೋ, ರಾಕ್ಷಸ